ಅಸಲು ದಾವಾ ನಂ.**119/2011**
ಪಿ ಡಬ್ಲ್ಯೂ **:1**

(ಇಂದು ದಿನಾಂಕಃ **17.03.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಸಿ ಎಂ ಸಿ ರವರಿಂದಃ

ದಿಃ 15.10.2008 ರಂದು ನಿಪಿ-7 ದಾಖಲೆಯನ್ನು ನೋಡಿರುತ್ತೇನೆ. ಸದರಿ ದಾಖಲೆ ನಮ್ಮ ಹತ್ತಿರವೇ ಇತ್ತು. ನಿಪಿ-7 ರಂತೆ 15.10.2008 ರಂದೇ ಕ್ರಯ ಪತ್ರ ಮಾಡಿಸಿಕೊಳ್ಳಬೇಕೆಂದು ಬರೆದಿತ್ತು. 15.10.2008 ರಂದು ಕ್ರಯ ಪತ್ರ ಮಾಡಿಸಿಕೊಂಡು ಹಣ ಕೊಟ್ಟಿರುತ್ತಾರೆ. ಸದರಿ ಕ್ರಯ ಪತ್ರ ಇರುತ್ತದೆ. 1ನೇ ಪ್ರತಿವಾದಿ ಕ್ರಯಪತ್ರವನ್ನು ಬರೆದುಕೊಡಬೇಕೆಂದು ದಾವೆ ದಾಖಲಿಸಿರುತ್ತೇವೆ. 1ನೇ ಪ್ರತಿವಾದಿಯ ಹೆಂಡತಿ ಮಕ್ಕಳು ಚಿಕ್ಕಮಗಳೂರಿನ ರಾಮನಹಳ್ಳಿಯಲ್ಲಿ ಇರುತ್ತಾರೆ. ನೋಟೀಸ್ ಸದರಿಯವರಿಗೆ ಕಳುಹಿಸಿದ್ದು, ಸದರಿ ನೋಟೀಸ್ ಏನಾಯಿತು ಎಂದು ನನಗೆ ಗೊತ್ತಿಲ್ಲ. ಜ್ಯೋತಿ ಮತ್ತು ದೀಪಿಕಾರವರು 1ನೇ ಪ್ರತಿವಾದಿಯ ಮಕ್ಕಳು ಎಂದು ತೋರಿಸಲು ಚುನಾವಣಾ ಗುರುತಿನ ಚೀಟಿ, ಆಹಾರ ಪಡಿತರ ಚೀಟಿ ಮತ್ತು ವಂಶವೃಕ್ಷ ಹಾಜರುಪಡಿಸಿರುವುದಿಲ್ಲ. ನಿಪಿ-7 ರಲ್ಲಿ 1ನೇ ಪ್ರತಿವಾದಿಗೆ ಹೆಂಡತಿ ಮತ್ತು ಮಕ್ಕಳು ಇರುವ ಬಗ್ಗೆ ಬರೆದಿರುವ ವಿಚಾರ ನನಗೆ ತಿಳಿದಿರುತ್ತದೆ.

ಹೊನ್ನಯ್ಯರವರ ಸಹಿ ನೀಲಿ ಇಂಕ್ ನಲ್ಲಿ ಮಾಡಲಾಗಿರುತ್ತದೆ ಎಂದರೆ ಸರಿ. 1ನೇ ಪ್ರತಿವಾದಿ ಸಹಿ ಮಾಡಿದಾಗ ನಾನು ಇರಲಿಲ್ಲ, ಆದರೆ ನನ್ನ ಗಂಡ ಇದ್ದರು. ನಿಪಿ-7 ರಲ್ಲಿರುವ ಸಹಿ 1ನೇ ಪ್ರತಿವಾದಿಯ ಸಹಿ ಅಲ್ಲ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ 35 ಸಾವಿರ ಹಣ ಕೊಟ್ಟಿಲ್ಲ, ಆದರೆ 75 ಸಾವಿರ ಹಣ ಕೊಟ್ಟಿರುತ್ತೇವೆ. ನಿಪಿ-7 ದಾಖಲೆಯನ್ನು 1ನೇ ಪ್ರತಿವಾದಿ 2ನೇ ಪ್ರತಿವಾದಿಗೆ ಬರೆದುಕೊಟ್ಟಿರುವ ಆಸ್ತಿಯನ್ನು ಕಬಳಿಸಬೇಕೆಂದು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಜ್ಯೋತಿ ಮತ್ತು ದೀಪಿಕಾ ಎನ್ನುವ ಹೆಂಡತಿ ಮತ್ತು ಮಗಳು ಇಲ್ಲ ಎಂದರೆ ಸರಿಯಲ್ಲ.

2ನೇ ಪ್ರತಿವಾದಿಗೆ ಆಗಿರುವ ಕ್ರಯಪತ್ರದಲ್ಲಿ ನಮೂದಿಸಿರುವ ಚಕ್ಕುಬಂದಿ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ನಮಗೆ ಬರೆದುಕೊಟ್ಟಿರುವ ದಾಖಲೆಗೂ ಮತ್ತು 2ನೇ ಪ್ರತಿವಾದಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ನನ್ನ ಮತ್ತು ನನ್ನ ಗಂಡನಿಗೂ ಯಾವುದೇ

ಸಂಬಂಧ ಇಲ್ಲ ಎಂದರೆ ಸರಿಯಲ್ಲ. 2ನೇ ಪ್ರತಿವಾದಿಗೆ ಸೇರಿದ ಜಮೀನನ್ನು ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ:- ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು